ದಿನಾಂಕ 30-10-2023 ಅಸಲು ದಾವಾ ಸಂ.176/2013
ಪಿ.ಡಬ್ಲ್ಯೂ-1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ.ಎಸ್ ಎ ಎಸ್ ವಕೀಲರಿಂದಃ-**

ನಾನು ಶಾಲೆ ಕಲಿತಿಲ್ಲ. ಭೀಮಪ್ಪ ಯಡ್ರಾವಿ ಇವರು ನನ್ನ ತಂದೆ. 6 ನೇ ವಾದಿ ನನ್ನ ತಾಯಿ. ಭೀಮಪ್ಪ ಯಡ್ರಾವಿ ಇವರಿಗೆ 5 ಜನ ಮಕ್ಕಳಿದ್ದು, ಅವರು ವಾದಿ ನಂ.1 ರಿಂದ 5 ಇರುತ್ತೇವೆ. ವಾದಿ ನಂ.2, 3 ಮತ್ತು 6 ರವರು ಶಾಲೆ ಕಲಿತಿಲ್ಲ. ನಾನು ಮತ್ತು 2 ನೇ ವಾದಿ ಹೆಬ್ಬೆಟ್ಟಿನ ಸಹಿ ಮಾಡುತ್ತೇವೆ. ಈ ದಾವೆಯಲ್ಲಿಯೂ ಸಹ ನಾವು ಹೆಬ್ಬೆಟ್ಟಿನ ಸಹಿ ಮಾಡಿದ್ದೇವೆಂದರೆ ಸರಿ.

ದಾವಾ ಆಸ್ತಿ 2 ಎಕರೆ 10 ಗುಂಟೆ ಜಮೀನು ಇದ್ದು ಅದು ಚಿಮ್ಮಡದಲ್ಲಿ ಇದೆ. ಸದರಿ ಆಸ್ತಿಯ ಸರ್ವೆ ನಂ.100/1 ಬಿ/1 ಅಂತಾ ಇದೆ. ಅದು ಮೂಲತಃ 5 ಎಕರೆ ಜಮೀನು ಎಂದರೆ ಸರಿ. ಅದರ ಸರ್ವೆ ನಂ.100/1 ಬಿ ಎಂದರೆ ಸರಿ. ಸದರಿ 5 ಎಕರೆ ಜಮೀನನ್ನು ನನ್ನ ತಂದೆ ಹಳಿಂಗಳಿಯಲ್ಲಿ ವಾಸವಿರುವ ಒಬ್ಬರಿಂದ ಖರೀದಿ ತೆಗೆದುಕೊಂಡಿದ್ದರು. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ ಸದರಿ 5 ಎಕರೆ ಜಮೀನನ್ನು ತನ್ನ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ್ದಾರೆ. ಸದರಿ 5 ಎಕರೆ ಜಮೀನಿನಲ್ಲಿ 21 ಗುಂಟೆ ಜಮೀನನ್ನು ಯಮನವ್ವ ಬೆಳಗಲಿ ಇವರಿಗೆ ಕೊಟ್ಟಿದ್ದಾರೆ ಮತ್ತು 2 ಎಕರೆ 09 ಗುಂಟೆ ಜಮೀನನ್ನು ಪಿರಾಜಿ ಕಲಾಲ ಇವರಿಗೆ ಕೊಟ್ಟಿದ್ದಾರೆ. ಸದರಿಯವರಿಗೆ ಕೊಟ್ಟ 2 ಎಕರೆ 9 ಗುಂಟೆ ಜಮೀನನ್ನು ನಾನು, ನನ್ನ ತಂಗಿಯವರು ಮತ್ತು ನನ್ನ ತಾಯಿ ಕೂಡಿ ಕೊಟ್ಟಿದ್ದೇವೆಂದರೆ ಸರಿ. ಸದರಿ ಜಮೀನನ್ನು ನಾವು 2000 ಇಸ್ವಿಯಲ್ಲಿ ಖರೀದಿ ಕೊಟ್ಟಿದ್ದೆವು. ಸದರಿ ಖರೀದಿ ಪತ್ರವನ್ನು ನಾವು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸದರಿ ಖರೀದಿ ಪತ್ರಕ್ಕೆ ನಾನು, ವಾದಿ ನಂ.2 ಮತ್ತು 6 ನಾವೆಲ್ಲರೂ ಹೆಬ್ಬೆಟ್ಟಿನ ಸಹಿ ಮಾಡಿದ್ದೇವೆಂದರೆ ಸರಿ. ಆ ಕಾಲಕ್ಕೆ ವಾದಿ ನಂ.3 ರಿಂದ 5 ರವರು ಅ. ಪಾ. ಕ. ಇದ್ದ ಕಾರಣ ಅವರ ಪರವಾಗಿ ನಮ್ಮ ತಾಯಿ ಅಂದರೆ ವಾದಿ ನಂ.6 ರವರು ಹೆಬ್ಬೆಟ್ಟಿನ ಸಹಿ ಮಾಡಿದ್ದರು ಎಂದರೆ ಸರಿ. ಸದರಿ ಜಮೀನನ್ನು ಎಷ್ಟು ಹಣಕ್ಕೆ ಖರೀದಿಗೆ ಕೊಟ್ಟಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಆ ಕಾಲಕ್ಕೆ ನಾನು, ವಾದಿ ನಂ.2 ಮತ್ತು 6 ಎಲ್ಲರೂ ಸಬ್ ರಜಿಸ್ಟ್ರಾರ್ ಕಚೇರಿಗೆ ಹೋಗಿದ್ದೆವು ಎಂದರೆ ಸರಿ. ಈ ದಾವೆಯಲ್ಲಿ ನಾವು, ನಮಗೆ ಸಹಿ ಮಾಡಲು ಬರುತ್ತದೆ, ನಾವು ಹೆಬ್ಬೆಟ್ಟಿನ ಸಹಿ ಮಾಡುವುದಿಲ್ಲ ಎಂದು ಹೇಳಿ ಬರೆಸಿಲ್ಲ. ವಾದಿ ನಂ.5 ಇವರು ನಮ್ಮೆಲ್ಲರಿಗಿಂತ ಸಣ್ಣವಳು ಎಂದರೆ ಸರಿ.

ಅವರು ಅವಳಿ-ಜವಳಿ ಅಲ್ಲ ಎಂದರೆ ಸರಿ. ಸದರಿಯವರ ಹುಟ್ಟಿದ ತಾರೀಖು ನನಗೆ ಹೇಳಲು ಬರುವುದಿಲ್ಲ. ಆಕೆಯ ಹುಟ್ಟಿದ ತಾರೀಖು ತೋರಿಸಲು ನಮ್ಮ ಶಾಲೆ ದಾಖಲೆಗಳನ್ನು ಹಾಜರುಪಡಿಸಿದ್ದೇವೆ. ನಾನು ಸದರಿ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಮಗೆ ಪ್ರಾಪಂಚಿಕ ಅಡಚಣೆ ಇದ್ದ ಕಾರಣ ನಮ್ಮ 5 ಎಕರೆ ಜಮೀನಿನ ಪೈಕಿ 21 ಗುಂಟೆ ಮತ್ತು 2 ಎಕರೆ 9 ಗುಂಟೆ ಜಮೀನನ್ನು ಖರೀದಿಗೆ ಕೊಟ್ಟಿದ್ದೆವು ಎಂದರೆ ಸರಿ. ಯಮನವ್ವ ಬೆಳಗಲಿ ಇವರಿಗೆ ಖರೀದಿ ಕೊಟ್ಟ 21 ಗುಂಟೆ ಜಮೀನಿನ ಕುರಿತು ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪೀರಾಜಿ ಕಲಾಲ ಇವರಿಗೆ ದಿನಾಂಕ 23-07-2001 ರಂದು ಖರೀದಿ ಕೊಟ್ಟಿದ್ದೆವು ಎಂದರೆ ಸರಿ. ಅದೇ ದಿನ ನಾನು, ನನ್ನ ತಂಗಿಯರು ಮತ್ತು ನನ್ನ ತಾಯಿ ಕೂಡಿ ಚಂದ್ರಶೇಖರ ಬಡಿಗೇರ (ಪ್ರತಿವಾದಿ) ಇವರಿಗೆ 2 ಎಕರೆ 10 ಗುಂಟೆ ಜಮೀನನ್ನು ಖರೀದಿ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ಅವರಿಂದ ನಾವು 78 ಸಾವಿರ ಹಣವನ್ನು ಪಡೆದಿದ್ದೆವು ಎಂದರೆ ಸರಿಯಲ್ಲ. ಕಲಾಲ ಇವರಿಗೆ ಖರೀದಿ ಕೊಟ್ಟ ಜಮೀನಿನ ಖರೀದಿ ಪತ್ರವನ್ನು ಬರೆದ ದಸ್ತು ಬರಹಗಾರರಾದ ನಾಗಪ್ಪ ಗುಣಕಿ ಇವರೇ ಪ್ರತಿವಾದಿಗೆ ಬರೆದುಕೊಟ್ಟಂತಹ ಖರೀದಿ ಪತ್ರವನ್ನು ಬರೆದಿದ್ದಾರೆಂದರೆ ಸಾಕ್ಷಿ ನಾವು ಯಾವುದೇ ಜಮೀನು ಕೊಟ್ಟಿಲ್ಲ, ಅದನ್ನು ಅವರು ನಕಲಾಗಿ ತಯಾರಿಸಿಕೊಂಡಿದ್ದಾರೆ ಎನ್ನುತ್ತಾರೆ. ಎಂ ಎಲ್ ಕೇಸರಗೊಪ್ಪ, ಎಚ್ ಬಿ ಭಜಂತ್ರಿ, ಪರಪ್ಪ ಭೀಮಪ್ಪ ಡಂಬರ್, ಎಸ್ ಆರ್ ಹಿರೇಮಠ, ಡಿ ಎಸ್ ಗಾಡಿವಡ್ಡರ, ಎಂ ವೈ ಕಬನೂರ, ಎಸ್ ಡಿ ಕಕಮರಿ ಮತ್ತು ನಾಗಪ್ಪ ಗುಣಕಿ ಇವರ ಜೊತೆ ನಮ್ಮದು ಯಾವುದೇ ವೈಮನಸ್ಸು ಇಲ್ಲ ಎಂದರೆ ಸರಿ. ಅವರಿಂದಲೂ ಸಹ ನಮ್ಮ ಮೇಲೆ ಯಾವುದೇ ವೈಮನಸ್ಸು ಇಲ್ಲ. ಪ್ರತಿವಾದಿಗೆ ಆದ ಖರೀದಿ ಪತ್ರ ಖೊಟ್ಟಿಯಾಗಿದೆ ಎಂದು ಸದರಿಯವರಿಗೆ ನಾವು ಯಾವ ಕಾಲಕ್ಕೂ ಹೇಳಿಲ್ಲ ಎಂದರೆ ಸರಿ. ಸಬ್ ರಜಿಸ್ಟ್ರಾರ್ ಅಧಿಕಾರಿ ಇವರಿಗೂ ಸಹ ಖೊಟ್ಟಿ ಖರೀದಿ ಪತ್ರ ಆಗಿದೆ ಎಂದು ಯಾವುದೇ ನೋಟೀಸ್ ಕೊಟ್ಟಿಲ್ಲ. ಪ್ರತಿವಾದಿಗಾಗಲೀ, ಸಬ್ ರಜಿಸ್ಟ್ರಾರ್ ಕಚೇರಿ ಅಧಿಕಾರಿಗಾಗಲೀ ಅಥವಾ ಖರೀದಿ ಪತ್ರದಲ್ಲಿ ತೋರಿಸಿದ ಸಾಕ್ಷಿದಾರರ ಮೇಲೆ ಆಗಲೀ ನಾನು ಯಾವುದೇ ಕ್ರಿಮಿನಲ್ ಕೇಸ್ ದಾಖಲಿಸಿರುವುದಿಲ್ಲ. ಖರೀದಿ ಪತ್ರ ಸರಿ ಇದ್ದ ಕಾರಣ ಸದರಿಯವರ ಮೇಲೆ ನಾನು ಯಾವುದೇ ಕ್ರಮಕೈಗೊಂಡಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.